ಪಿಡಿಒ ಎಲ್ಲಿ ಅಂತ ಒಬ್ಬ ಎಚ್ಚಿ ಗುಂಪಲ್ಲಿದ್ದವರ ಕಡೆ ನೋಡದೆ ಕೇಳಿದ. ಅದಕ್ಕೆ ಉತ್ತರ ಎಂಬಂತೆ ಪಂಚಾಯ್ತಿ ಮೆಂಬರು ನರಸಿಂಹಪ್ಪ, 'ಬರ್ರಿ ಸಾ, ಇಲ್ಲೇ ಪಂಚಾಯ್ತಿ ಚೇರ್ಮನ್ನರ ಮನೆ ಐತೆ. ಅಲ್ಲಿಗೆ ಹೋಗನ' ಅಂದ.

'ಅಗೋ ಅಲ್ಲಿ ಕಾಣ್ತದಲ್ಲ ಅದೇ ಮಾಜಿ ಚೇರ್ಮನ್ನರ ಮನೆ. ಅವರೇ ವಿರೋಧ ಪಕ್ಷದ ಹೋಬಳಿ ಸಮಿತಿ ಉಪಾಧ್ಯಕ್ಷರು... ಅಲ್ಲಿಗೆ ಹೋಗನ ಬರ್ರಿ...' ಅಂತ ದಾಸಣ್ಣನ ಕಡೆಯವನೊಬ್ಬ ಹೇಳಿದನಲ್ಲದೆ 'ಪಿಡಿಒನ ಅಲ್ಲಿಗೇ ಕರೆಸಿದರಾತು' ಅಂದ. ಆದರೆ ಎಚ್ಚಿಗಳು ಯಾರ ಜತೆಗೂ ಹೋಗುವ ಉತ್ಸಾಹ ತೋರಲಿಲ್ಲ.

'ನಂಗೆ ಹೊಟ್ಟೆ ಹಸೀತಾ ಐತೆ... ನಾನಿನ್ನೂ ತಿಂಡಿ ತಿಂದಿಲ್ಲ... ಬೆಳಗಿನಿಂದ ಸ್ಟೇಷನ್ ಡೈರಿ ಬರೆಯೋದೇ ಆಯ್ತು...' ಅಂತ ಒಬ್ಬ ಎಚ್ಚಿ ಹೇಳಿದ್ದೇ ತಡ ನರಸಿಂಹಪ್ಪ, 'ಬರ್ರಿ ಸಾ... ಇಲ್ಲೇ ಕಮಲಮ್ಮನ ಓಟ್ಲಿಗೆ ಹೋಗನ' ಅಂದು ಬಿಟ್ಟ. ಮರುಕ್ಷಣವೇ ಇಬ್ಬರೂ ನರಸಿಂಹಪ್ಪನ ಜತೆ ಹೊರಟು ನಿಂತರು. ದಾಸಣ್ಣ ಕಡೆಯವರು ಈ ಅನಿರೀಕ್ಷಿತ ಬೆಳವಣಿಗೆಯನ್ನು ಸುಮ್ಮನೆ ನಿಂತು ನೋಡಬೇಕಾಯಿತು. ಪೊಲೀಸರು ಕಮಲಮ್ಮನ ಗುಡಿಸಲು ಹೋಟೆಲ್ ಕಡೆಗೆ ಹೋಗುತ್ತಿದ್ದಂತೆ ಅನೇಕರು ಅವರನ್ನು ಹಿಂಬಾಲಿಸಿದರು. ಕೆಲವರು ಒಳಕ್ಕೂ ಹೋದರು.

ಎಚ್ಚಿಗಳು ಹೋಟೆಲ್‌ನಿಂದ ಹೊರ ಬಂದಾಗ ಹನ್ನೆರಡು ಗಂಟೆ ಆಗಿತ್ತು. ಆ ಮೇಲೆ ಕೆರೆಯ ದಾರಿ ಯಾವುದು ಅಂತ ಕೇಳಿ, ಮೋಟರ್ ಸೈಕಲ್ ಹತ್ತಿದರು. ಹೋಗುವ ಮೊದಲು, 'ಪಂಚಾಯ್ತಿ ಚೇರ್ಮನ್ನರು ಮತ್ತು ಪಿಡಿಒ ಅವರನ್ನು ಕೆರೆ ಹತ್ರ ಕಳಿಸಿ... ಊರಲ್ಲಿ ಈಜು ಬರೋ ಧೈರ್ಯವಂತರು ಯಾರಾದರೂ ಇದ್ದರೆ ಅವರನ್ನೂ ಕರಕೊಂಡು ಬರೋಕೆ ಹೇಳ್ರಿ... ನಮ್ಮ ಸಾಹೇಬರು ಮೂರು ಗಂಟೆ ಹೊತ್ತಿಗೆ ಬರಬೌದು. ಅವರು ಬಂದ ಮೇಲೆ ಹೆಣ ಎತ್ತೋದು...' ಅಂತ ಹೇಳಿ ಹೊರಟೇಹೋದರು.

ಕೆರೆಯ ಬಳಿಗೆ ಬಂದ ಎಚ್ಚಿಗಳು ಸ್ವಲ್ಪ ಹೊತ್ತು ಹೆಣಗಳನ್ನು ನೋಡಿದರು. ಅವು ಕೆರೆಯ ಮಧ್ಯ ನಿಂತು ಬಿಟ್ಟಿರೋದಕ್ಕೆ ಏನು ಕಾರಣ ಇರಬಹುದು ಅಂತ ಯೋಚಿಸಿದರು. ಅವನ್ನು ಹೊರಕ್ಕೆ ಎಳೆದು ಹಾಕೋದು ಸುಲಭ ಅಲ್ಲ ಅನ್ನಿಸಿತು. ನೋಡಿ ಸಾಕಾದ ಮೇಲೆ ಏರಿ ಮೇಲಿದ್ದ ನೇರಳೆಮರದ ನೆರಳಿನಲ್ಲಿ ಕೂತು ಸುಧಾರಿಸಿಕೊಂಡರು.

'ಕಮಲಮ್ಮನ ಹೋಟ್ಳಿನ ಮಸಾಲೆ ದೋಸೆ ಚೆನ್ನಾಗಿತ್ತಯ್ಯ. ಕಾಫಿ ಚೆನ್ನಾಗಿರಲಿಲ್ಲ. ಒಳ್ಳೇ ಕಾಫಿ ಸಿಕ್ಕಿದ್ದರೆ...' ಅಂತ ಇಬ್ಬರೂ ಮಾತಾಡಿಕೊಳ್ಳುತ್ತ, 'ಸಾಹೇಬರು ಬರೋದರೊಳಗೆ ಕೆರೆಯಲ್ಲಿ ಈಜೋರನ್ನು ಕರೆಸಬೇಕು. ಇಲ್ಲಿಗೆ ಬರೋ ಮೊದಲು ಚೇರ್ಮನ್ನರು ಅಥವಾ ಪಿಡಿಒ ಅವರನ್ನು ನೋಡಿಕೊಂಡು ಬಂದಿದ್ದರೆ ಚೆನ್ನಾಗಿತ್ತು...' ಅಂತ ಒಬ್ಬ ಹೇಳಿದ. ಅವರನ್ನು ನೋಡದೆ ಬಂದಿದ್ದಕ್ಕೆ ಇಬ್ಬರೂ ಪೇಚಾಡಿಕೊಂಡರು.

ಎರಡು ಗಂಟೆ ಹೊತ್ತಿಗೆ ಕೆರೆಯ ಬಳಿ ಒಂದೂವರೆ ಸಾವಿರಕ್ಕೂ ಹೆಚ್ಚು ಜನ ಸೇರಿದ್ದರು. ಓಡಾಡಲು ಆಗದ ಮುದುಕರು, ಹೆಂಗಸರು, ಮಕ್ಕಳು ಮಾತ್ರ ಊರಲ್ಲಿ ಉಳಿದರು. ಹೆಣಗಳು ದಂಡೆಯ ಕಡೆಗೆ ಬರದೇ ಕೆರೆಯ ಮಧ್ಯ ನಿಂತು ಬಿಟ್ಟಿರೋದು ಹೇಗೆಂಬ ಕುತೂಹಲ. ಒಬ್ಬ ಎಚ್ಚಿ ಏರಿಯ ಮೇಲೆ ನಿಂತು ಹೆಣಗಳನ್ನು ನೋಡುತ್ತಿದ್ದ ಜನರ ಹತ್ತಿರ ಹೋಗಿ, 'ಕೆರೆಯಲ್ಲಿ ಈಜೋರು ನಿಮ್ಮೂರಲ್ಲಿ ಯಾರಾದರೂ ಇದ್ದಾರಾ' ಅಂತ ವಿಚಾರಿಸಿದ. ಜನ ಅವನ ಮಾತುಗಳನ್ನು ಕೇಳಿಸಿಕೊಂಡರೇ ವಿನಾ ಉತ್ತರಿಸಲಿಲ್ಲ.

'ಯಾವ ಸೀಮೆ ಊರಯ್ಯಾ ಇದು... ಹೇಳೋರು ಕೇಳೋರು ಯಾರೂ ಇದ್ದಂಗಿಲ್ಲ. ಈ ಊರಿಗೊಬ್ಬ ಮುಖಂಡನೂ ಇಲ್ಲ. ಪಂಚಾಯ್ತಿಗೂ ದಿಕ್ಕು ದೆಸೆ ಇದ್ದಂಗಿಲ್ಲ. ಈ ಜನರೂ ಮಂಕುದಿಣ್ಣೆಗಳು... ಈ ವಯಸ್ಸಲ್ಲಿ ನಮ್ಮನ್ನ ಹೆಣಾ ಕಾಯೋ ಡ್ಯೂಟಿಗೆ ಕಳಿಸ್ತಾರಲ್ಲಯ್ಯ... ಸರ್ವೀಸು